





**ಕಲಾವಿದ ಎಂ. ವೀರಪ್ಪನವರ ಸೃಜನಶೀಲತೆಯಲ್ಲಿ ರೂಪುಗೊಂಡ 'ಮೈಸೂರು ಟಾಯ್ಸ್' ಯಶಸ್ವಿ ಉದ್ಯಮವಾಗಿ ರೂಪುಗೊಂಡಿತ್ತು ಹಾಗೂ ಅದರ ಉತ್ಪನ್ನಗಳಾದ ಆಟಿಕೆಗಳು ಮಕ್ಕಳ ಮನಸೂರೆಗೊಂಡಿದ್ದವು. ಈಗ 'ಮೈಸೂರು ಟಾಯ್ಸ್' ನೆನಪು ಮಾತ್ರ.**

ಅನೇಕ ಗಣ್ಯರ 'ರೂಪಚಿತ್ರ'ಗಳನ್ನು ರಚಿಸಿ ಮೆಚ್ಚುಗೆ ಗಳಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾರ್ಯದರ್ಶಿಗಳಾಗಿದ್ದ ಬ್ರಿಟಿಷ್ ಅಧಿಕಾರಿ ಟಾಡ್ ಹಂಟರ್, ಆಗಾಗ ವಿದೇಶ ಪ್ರವಾಸ ಕೈಗೊಳ್ಳುತ್ತಿದ್ದರು. ವಿದೇಶದಿಂದ ಬಂದಿದ್ದ ಡಾಟ್ ಹಂಟರ್ ಅವರಿಗೆ ತಮ್ಮ ತವರಿನಿಂದ ತಂದಿದ್ದ ಬೊಂಬೆಗಳನ್ನು ಸ್ಥಳೀಯ ಮಾದರಿಯಲ್ಲಿ ರಚಿಸಿದರೆ ಹೇಗೆ ಎಂಬ ಯೋಚನೆ ಬಂತು. ಆಗ 'ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಶಾಲೆ'ಯ ಆಯುಕ್ತರಾಗಿದ್ದ ರಾಮಸ್ವಾಮಿ ಅಯ್ಯಂಗಾರ್ ಅವರಲ್ಲಿ ತಮ್ಮ ಯೋಚನೆಯನ್ನು ಹಂಚಿಕೊಂಡು, ತಾವು ತಂದಿದ್ದ ವಿದೇಶಿ ಗೊಂಬೆಗಳನ್ನು ಅವರ ವಶಕ್ಕೆ ಕೊಟ್ಟರು. ಸ್ಥಳೀಯವಾಗಿ ಬೊಂಬೆ ಸಿದ್ಧಗೊಳಿಸುವ ಹೊಣೆಗಾರಿಕೆಯನ್ನು ಅಯ್ಯಂಗಾರರು ವಹಿಸಿದ್ದು ಸೃಜನಶೀಲ ಕಲಾವಿದ ಎಂ. ವೀರಪ್ಪನವರಿಗೆ.

ವೀರಪ್ಪನವರು ಮೊದಲಿಗೆ ವಿದೇಶಿ ಮೂಲ ಮಾದರಿಯಂತೆಯೇ ಗೊಂಬೆಗಳನ್ನು ತಯಾರಿಸಿಕೊಟ್ಟರು. ಅವು ಟಾಡ್ ಹಂಟರ್ ಅವರಿಗೆ ಇಷ್ಟವಾದವು. ಬೊಂಬೆ ಕಲೆಯಲ್ಲೇ ನಿರತರಾಗುವಂತೆ ಅವರಿಂದ ಸೂಚನೆಯೂ ಸಿಕ್ಕಿತು.

ಬೊಂಬೆಗಳನ್ನು ಮೆದು ಮರದಿಂದ ತಯಾರಿಸಿ ಜನರನ್ನು ಸೆಳೆದ ವೀರಪ್ಪನವರು, ವೈವಿಧ್ಯಮಯ ಆಟಿಕೆಗಳತ್ತಲೂ ಗಮನಹರಿಸಿದರು. ಅದಕ್ಕೆ ಶಿಕ್ಷಣ ಇಲಾಖೆ ನಿರ್ದೇಶಕ ಕಸ್ತೂರಿ ರಾಜ್ ಜೆಟ್ಟಿ ಅವರ ಪ್ರೋತ್ಸಾಹವೂ ಇತ್ತು. ಮಕ್ಕಳ ಮನರಂಜನೆ ಮತ್ತು ಮನೋವಿಕಾಸಕ್ಕೆ ಪೂರಕವಾದ ಅನೇಕ ಆಟಿಕೆಗಳು ವೀರಪ್ಪನವರ ಕಲ್ಪನಾಮೂಸೆಯಿಂದ ರೂಪುಗೊಂಡವು. ಮಕ್ಕಳಿಗೆ ಇಷ್ಟವಾಗುವ ಪ್ರಾಣಿ ಪಕ್ಷಿಗಳೂ ಆಟಿಕೆಗಳಾಗಿ ಮೂಡಿಬಂದವು.

ಶಾಲಾಮಕ್ಕಳ ಶೈಕ್ಷಣಿಕ ಹಾಗೂ ಮನೋವಿಕಾಸಕ್ಕೆ ಪೂರಕವಾಗುವ ಆಟಿಕೆಗಳನ್ನು ವೀರಪ್ಪನವರು ಸಿದ್ಧಗೊಳಿಸಿದ್ದು ಗಮನಾರ್ಹ. ಅವರ ಕೆಲಸಕ್ಕೆ ಶಿಕ್ಷಣ ಇಲಾಖೆಯೂ ಬೆಂಬಲ ನೀಡಿತು. ಬೊಂಬೆಕಲೆಗೆ ದೊರೆತ ಪ್ರೋತ್ಸಾಹದ ಹಿನ್ನೆಲೆಯಲ್ಲಿ ವೀರಪ್ಪನವರು 'ಮೈಸೂರು ಟಾಯ್ಸ್' ಎನ್ನುವ ಆಟಿಕೆಗಳನ್ನು ತಯಾರಿಸುವ ಪುಟ್ಟ ಕಾರ್ಖಾನೆ ಪ್ರಾರಂಭಿಸಿದರು. ಅದು ಬಹುಬೇಗ ಅಭಿವೃದ್ಧಿ ಕಂಡು, ಅಲ್ಲಿ ತಯಾರಾದ ಬೊಂಬೆ–ಆಟಿಕೆಗಳು ನಾಡಿನೆಲ್ಲೆಡೆ ಜನ ಕಾಣುವಂತಾಗಿ ಜನಪ್ರಿಯತೆ ಹೆಚ್ಚಿತು. 'ಮೈಸೂರು ಟಾಯ್ಸ್' ಸಿದ್ಧಗೊಳಿಸಿದ ಹುಲಿ, ಸಿಂಹ, ಕೋತಿ, ಕುರಿ, ಜಿಂಕೆ, ಆನೆ, ವಿವಿಧ ಪಕ್ಷಿಗಳ ಆಟಿಕೆಗಳು ಗಣಿತ, ವಿಜ್ಞಾನಕ್ಕೆ ಸಂಬಂಧಿಸಿದ ಆಟಿಕೆಗಳು ವೀರಪ್ಪನವರಿಗೆ ಖ್ಯಾತಿ ತಂದುಕೊಟ್ಟವು.

ಮೈಸೂರಿನ ಚಾಮುಂಡೇಶ್ವರಿ ಚಿತ್ರಮಂದಿರದ ಬದಿಯ ಮಹಡಿಯಲ್ಲಿದ್ದ 'ಮೈಸೂರು ಟಾಯ್ಸ್' ಕಾರ್ಖಾನೆಯು ಒಂಟಿಕೊಪ್ಪಲ್‌ನ ಚಿತ್ರಾಲಯಕ್ಕೂ ವಿಸ್ತರಣೆಗೊಂಡಿತು. ವಿದ್ಯಾರ್ಥಿಗಳಿಗೆ ಬೋಧನಾತ್ಮಕ ಆಟಿಕೆಗಳೇ ಅಲ್ಲದೆ 'ವಿಮಲಾ ಡ್ರಾಯಿಂಗ್ ಬುಕ್' ಕೂಡ ವೀರಪ್ಪನವರಿಂದ ರೂಪುಗೊಂಡು ಶಾಲಾಮಕ್ಕಳ ಗಮನ ಸೆಳೆಯಿತು.

ತಮ್ಮ ಕರಕುಶಲತೆಯಿಂದ ನಾಡಿಗೆ ಹೆಸರಾದ ವೀರಪ್ಪನವರ ಕಾರ್ಯಾಲಯಕ್ಕೆ ಭೇಟಿ ಕೊಟ್ಟ 'ರಾಷ್ಟ್ರೀಯ ಕರಕುಶಲ ಮಂಡಲಿ' ಅಧ್ಯಕ್ಷೆ ಕಮಲಾದೇವಿ ಚಟ್ಟೋಪಧ್ಯಾಯ ಅವರು 'ಮೈಸೂರು ಟಾಯ್ಸ್'ಗೆ ಭೇಟಿಕೊಟ್ಟಿದ್ದರು. ಅವರು, ಬೊಂಬೆಗಳನ್ನು ಪ್ಯಾಕ್ ಮಾಡುವ ಕಲೆ ತರಬೇತಿಗೆಂದು ವೀರಪ್ಪನವರನ್ನು ಜಪಾನ್‌ಗೆ ಕಳುಹಿಸಿದರು.

ಅರಗುಕಲೆ, ಆಟಿಕೆ, ಬೊಂಬೆಗಳನ್ನು ಪ್ಯಾಕ್ ಮಾಡುವ ಕಲೆಯಲ್ಲಿ ತರಬೇತಿ ಪಡೆದು ಹಿಂತಿರುಗಿದ ವೀರಪ್ಪನವರಿಗೆ 'ಕಾವಾ'ದಲ್ಲಿ ನೌಕರಿ ಕಾದು ಕುಳಿತಿತ್ತು. ಅಲ್ಲಿ ವಿದ್ಯಾರ್ಥಿಗಳಿಗೆ ಬೊಂಬೆ, ಆಟಿಕೆ ತಯಾರಿಸುವುದನ್ನು ಕಲಿಸಲಾಗುತ್ತಿತ್ತು. ಸಿದ್ಧಗೊಂಡ ವಸ್ತುಗಳನ್ನು ದಸರಾ ಸಂದರ್ಭದಲ್ಲಿ ವಿದ್ಯಾರ್ಥಿಗಳೇ ಮಾರಾಟ ಮಾಡಿ ಆದಾಯ ಗಳಿಸುವ ದಾರಿ ತೋರಿದ ವೀರಪ್ಪ, ತಾವು ವಿದೇಶದಲ್ಲಿ ಕಲಿತು ಬಂದ ಕಲೆಯನ್ನು ಸ್ಥಳೀಯ ವಿದ್ಯಾರ್ಥಿಗಳಿಗೂ ಅನುಕೂಲವಾಗಲೆಂದು 'ಕಾವಾ'ದಲ್ಲಿ ಅಲ್ಪಾವಧಿ ಪ್ಯಾಕಿಂಗ್ ಕೋರ್ಸ್ ಪ್ರಾರಂಭ ಮಾಡಿದರು.

1936ರಲ್ಲಿ ಆರಂಭವಾದ 'ಮೈಸೂರು ಟಾಯ್ಸ್' ಎಂಬ ಮಕ್ಕಳ ಆಟಿಕೆಗಳ ಕಾರ್ಖಾನೆ ಐದು ದಶಕಗಳ ಕಾಲ ಯಶಸ್ವಿಯಾಗಿ ನಡೆಯಿತು. ಮಕ್ಕಳ ಬುದ್ಧಿ ವಿಕಾಸಕ್ಕೆ ನೆರವಾಗುವುದಲ್ಲದೆ, ದಸರಾ ಪ್ರದರ್ಶನಕ್ಕೆ ಮನೆಗಳ ಶೋಕೇಸ್‌ಗಳಲ್ಲಿ ಇಡುವುದಕ್ಕೆ ಅನುಕೂಲವಾಗುವ ಬೊಂಬೆ–ಆಟಿಕೆಗಳನ್ನು ಸ್ಥಳೀಯ ಉತ್ಪನ್ನಗಳಿಂದಲೇ ಸಿದ್ಧಗೊಳಿಸುತ್ತಿದ್ದ 'ಮೈಸೂರು ಟಾಯ್ಸ್' ಈಗ ನೆನಪು ಮಾತ್ರ. ಬೆಂಗಳೂರಿನ ಮೆಜೆಸ್ಟಿಕ್ ಸೇರಿದಂತೆ ರಾಜ್ಯದ ಅನೇಕ ಕಡೆ ಮಳಿಗೆಗಳನ್ನು ಹೊಂದಿದ್ದುದು 'ಮೈಸೂರು ಟಾಯ್ಸ್'ನ ಹೆಗ್ಗಳಿಕೆಗಳಲ್ಲೊಂದು.

ವೀರಪ್ಪನವರ ಮೊಮ್ಮಗ ಸಂಜಯ್ ತಮ್ಮ ತಾತನ ಕೃತಿಗಳನ್ನು ಸಂರಕ್ಷಿಸಿದ್ದಾರೆ ಹಾಗೂ ಅವರೇ ಆರಂಭಿಸಿದ ಕಲಾಗ್ಯಾಲರಿ 'ಚಿತ್ರಾಲಯ'ದ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. 'ಮೈಸೂರು ಟಾಯ್ಸ್' ಕನ್ನಡನಾಡಿನ ಆಟಿಕೆ ಗೊಂಬೆಗಳ ಇತಿಹಾಸವನ್ನಷ್ಟೇ ಹೇಳುವುದಿಲ್ಲ, ನಾವು ಕಳೆದುಕೊಂಡ ಕರಕುಶಲ ಉದ್ಯಮದ ವಿಷಾದಗಾಥೆಯನ್ನೂ ಹೇಳುವಂತಿದೆ.

ಪ್ರತಿಕ್ರಿಯಿಸಿ: feedback@sudha.co.in

